ಅ) ಇದುವರೆಗೆ ಸಂದಾಯ ಮಾಡದಿದ್ದಲ್ಲಿ ಇದಕ್ಕೆ ಕಾರಣಗಳೇನು?

ಇ) ಸಂದಾಯ ಮಾಡದಿದ್ದಲ್ಲಿ ಪೂರ್ಣ ವಿವರ ನೀಡುವುದು?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) 1996-97ನೇ ಸಾಲಿನಲ್ಲಿ ಇದುವರೆವಿಗೂ ವಿಮಾ ನಷ್ಟ ಪರಿಹಾರವನ್ನು ಸಂದಾಯ ಮಾಡಲಾಗಿರುವುದಿಲ್ಲ.

ಆ) 1996-97ನೇ ಸಾಲಿನ ನಷ್ಟ ಪರಿಹಾರದ ವಿವರಗಳನ್ನು ಕೇಂದ್ರ ಸರ್ಕಾರದ ಅನುಮೋದನೆಗೆ ಕಳುಹಿಸಿದ್ದು, ಅಲ್ಲಿಂದ ಅನುಮೋದನೆ ದೊರೆತ ಕೂಡಲೇ ವಿಮಾ ನಷ್ಟ ಪರಿಹಾರವನ್ನು ವಿವಿಧ ಬ್ಯಾಂಕುಗಳಲ್ಲಿರುವ ರೈತರ ಖಾತೆಗೆ ಜಮಾ ಮಾಡಲಾಗುವುದು.

ಇ) ಮುಂಗಾರು 1996ರ ಇಳುವರಿ ಮಾಹಿತಿಯ ಬಗ್ಗೆ ಕೇಂದ್ರದಿಂದ ಘಟನೋತ್ತರ ಮಂಜೂರಾತಿ ಪಡೆಯಬೇಕಾಗಿತ್ತು. ಈಗ ಕೇಂದ್ರದಿಂದ ಘಟನೋತ್ತರ ಮಂಜೂರಾತಿ ದೊರಕಿದ್ದು, 1996-97ರ ನಷ್ಟ ಪರಿಹಾರದ ವಿವರಕ್ಕೆ ಕೇಂದ್ರದಿಂದ ಅನುಮೋದನೆ ಬರಬೇಕಾಗಿರುತ್ತದೆ.

ಬಾದಾಮಿ ಕ್ಷೇತ್ರದಲ್ಲಿ ಗೃಹ ನಿರ್ಮಾಣ ಮಂಡಳಿಯಿಂದ ಮನೆಗಳ ನಿರ್ಮಾಣ

1655 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬದಾಮಿ ಮತಕ್ಷೇತ್ರದಲ್ಲಿ ಕೆರೂರ, ಬದಾಮಿ ಪಟ್ಟಣಗಳಲ್ಲಿ ಗೃಹ ನಿರ್ಮಾಣ ಮಂಡಳಿಯಿಂದ ಮನೆಗಳು ನಿರ್ಮಾಣವಾಗದೇ ಇರುವುದದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಬದಾಮಿ, ಕೆರೂರ ಪಟ್ಟಣಗಳ ನಾಗರೀಕರಿಗೆ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯಿಂದ ಮನೆಗಳನ್ನು ಕಟ್ಟಲು ಸರಕಾರ ಕ್ರಮ ಕೈಗೊಳ್ಳುವುದೆ?

ಇ) ಹಾಗಿದ್ದಲ್ಲಿ, ಯಾವಾಗ ನಿರ್ಮಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) 1982ನೇ ಜೂನ್ ತಿಂಗಳಲ್ಲಿ ಬದಾಮಿಯ 1 ಎಕರೆ 25 ಗುಂಟೆ ಜಮೀನು ಖರೀದಿಸಿ, 20 ಎಲ್.ಐ.ಜಿ. ಮನೆಗಳನ್ನು 87-88ರಲ್ಲಿ ಕಟ್ಟಲಾಯಿತು. ಈ ಪೈಕಿ 10 ಮನೆಗಳನ್ನು ನೀರಾವರಿ ಇಲಾಖೆ ಮತ್ತು ಉಳಿಕೆ ಹತ್ತು ಮನೆಗಳನ್ನು 89-90ನೇ ಸಾಲಿನಲ್ಲಿ ಸಾರ್ವಜನಿಕರಿಗೆ ಹಂಚಲಾಗಿದೆ.

ಆ) ಈ ಪಟ್ಟಣಗಳಲ್ಲಿ ಮನೆಗಳನ್ನು ಕಟ್ಟುವ ಯೋಜನೆಯನ್ನು ಪರಿಶೀಲಿಸಲಾಗುತ್ತಿದೆ.

ಇ) ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಇದು ಮುಗಿದನಂತರ ಬೇಡಿಕೆ ಸಮೀಕ್ಷೆ ನಡೆಸಿ ಸೂಕ್ತ ಬೇಡಿಕೆ ಇದ್ದಲ್ಲಿ ಮನೆಗಳನ್ನು ಕಟ್ಟುವ ಕಾರ್ಯ ಕೈಗೊಳ್ಳಲಾಗುವುದು.